ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 19/11/2019

# ಎನ್‌ಸಿಪಿ, ಬಿಜೆಡಿ ಬಗ್ಗೆ ಮೆಚ್ಚುಗೆ

## ರಾಜ್ಯಸಭೆಯ 250ನೇ ಕಲಾಪದಲ್ಲಿ ಮೋದಿ ಶ್ಲಾಘನೆ

**ನವದೆಹಲಿ:** "ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) ಹಾಗೂ ಬಿಜು ಜನತಾ ದಳ (ಬಿಜೆಡಿ) ಸಂಸದರನ್ನು ನೋಡಿ ಕಲಿಯಬೇಕು. ರಾಜ್ಯಸಭೆಯಲ್ಲಿ ಅವರು ನಡೆದುಕೊಂಡಿರುವ ರೀತಿ ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳಿಗೂ ಮಾದರಿ" ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

ಸೋಮವಾರ ಜರುಗಿದ ರಾಜ್ಯಸಭೆಯ ಐತಿಹಾಸಿಕ 250ನೇ ಕಲಾಪದಲ್ಲಿ ಮಾತನಾಡಿದ ಅವರು, "ನಾನು ಕಂಡಂತೆ, ಎನ್‌ಸಿಪಿ ಹಾಗೂ ಬಿಜೆಡಿ ಸದಸ್ಯರು ಒಂದು ದಿನವಾದರೂ ರಾಜ್ಯಸಭೆಯಲ್ಲಿ ಸದನದ ಬಾವಿಗೆ ಇಳಿದು ಗದ್ದಲ ನಡೆಸಿಲ್ಲ. ಸದನದ ನಡಾವಳಿಗಳನ್ನು ಹೇಗೆ ಪಾಲಿಸಬೇಕೆಂಬುದಕ್ಕೆ ಅವರು ಮಾದರಿಯಾಗಿದ್ದಾರೆ. ಅವರ ನಡೆಯನ್ನು ನನ್ನ ಪಕ್ಷವಾದ ಬಿಜೆಪಿಯೂ ಸೇರಿದಂತೆ ಅನೇಕ ಪಕ್ಷಗಳು ಪಾಲಿಸಬೇಕಿದೆ" ಎಂದರು. ಅಲ್ಲದೆ, "ಸದನದಲ್ಲಿ ಗದ್ದಲ ಮಾಡದೆಯೂ ಜನರ ಪರವಾಗಿ ದನಿಯೆತ್ತಬಹುದು ಎಂಬುದಕ್ಕೆ ಈ ಎರಡೂ ಪಕ್ಷಗಳ ರಾಜ್ಯಸಭಾ ಸದಸ್ಯರು ಉದಾಹರಣೆ" ಎಂದು ಕೊಂಡಾಡಿದರು.



**ವಾಜಪೇಯಿ, ಅಂಬೇಡ್ಕರ್ ಸ್ಮರಣೆ:** ಸಂವಿಧಾನದ 370 ಹಾಗೂ 35 (ಎ) ವಿಧಿಯನ್ನು ರದ್ದುಗೊಳಿಸಿದ್ದು, ತ್ರಿವಳಿ ತಲಾಖ್, ಜಿಎಸ್‌ಟಿಯಂಥ ಮಹತ್ವದ ವಿಧೇಯಕಗಳಿಗೆ ಒಪ್ಪಿಗೆ ನೀಡುವ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಿ ರಾಜ್ಯಸಭೆ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದೆ ಎಂದ ಮೋದಿ, "ರಾಜ್ಯಸಭೆಯು ಹೀಗೆ ಜವಾಬ್ದಾರಿಯುತವಾಗಿ ವರ್ತಿಸಬೇಕೆಂದು ಸದಾ ಆಶಿಸಿದ್ದ ಮಾಜಿ ಪ್ರಧಾನಿ ವಾಜಪೇಯಿ, ಹಿಂದೊಮ್ಮೆ ತಮ್ಮ ಭಾಷಣದಲ್ಲಿ ರಾಜ್ಯಸಭೆಯು ಎರಡನೇ ಲೋಕಸಭೆಯಾಗಿರಬಾರದು" ಎಂದು ಸೂಚ್ಯವಾಗಿ ಹೇಳಿದ್ದರು" ಎಂದು ಸ್ಮರಿಸಿದರು.

ರಾಜ್ಯಸಭೆಯ ಸದಸ್ಯರ ಸೇವೆ ಸ್ಮರಿಸಿದ ಅವರು, "ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ, ಇಲ್ಲಿನಿಂದಲೇ ಕೇಂದ್ರ ಸಂಪುಟಕ್ಕೆ ಕಾಲಿಡಲು ಅವಕಾಶ ಸಿಕ್ಕಿತ್ತು. ಇದರಿಂದಾಗಿಯೇ ಅವರು ದೇಶಕ್ಕೆ ಉನ್ನತ ಕೊಡುಗೆ ನೀಡಲು ಸಾಧ್ಯವಾಯಿತು" ಎಂದರು.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು, ರಾಜ್ಯಸಭೆಗೆ ಅಧಿಕಾರ ಬಂದಿದ್ದೇ ನೆಹರೂ ಅವರಿಂದ ಎಂದು ಮೊದಲ ಪ್ರಧಾನಿಯನ್ನು ಸ್ಮರಿಸಿದರು.